

ಎಂಬತ್ತರ ದಶಕದ ಒಂದು ಹೆಸರಾಂತ ಹಿಂದಿ ಸಿನೆಮಾ 'ಸಿಲ್‌ಸಿಲಾ' ಮತ್ತು ಅದರ ಹಾಡು ನಿಮಗೆ ನೆನಪಿರಬಹುದು. ಅಮಿತಾಭ್ ಬಚ್ಚನ್ ಮತ್ತು ರೇಖಾ , ಕೆಂಪು ಹಳದಿ ಬಿಳಿ ಬಣ್ಣದ ವಿಶಾಲ ಹೂವಿನ ತೋಟದ ನಡುವೆ ಹೇಳುವ ಹಾಡು 'ದೇಖಾ ಏಕ್ ಕ್ವಾಬ್ ತೊ ಯೆ ಸಿಲ್ ಸಿಲೇ ಹುವಿ.' ಅತ್ಯಂತ ಜನಪ್ರಿಯ ಹಾಡದು. ಭಾರತದಿಂದ 4000 ಮೈಲು ದೂರದ ಅಮ್‌ಸ್ಟರ್‌ಡ್ಯಾಮ್ ಪಟ್ಟಣದ ಸಮೀಪದ ಟುಲಿಪ್ ಹೂವುಗಳ ತೋಟವನ್ನು ಭಾರತದಲ್ಲಿ ಜನಪ್ರಿಯ ಗೊಳಿಸಿದ ಹಾಡದು.

ಮಲ್ಲಿಗೆಯ ಪರಿಮಳ ಅಥವಾ ಗುಲಾಬಿಯ ಕಡು ಬಣ್ಣ ಮತ್ತು ಎಸಳುಗಳ ಸಂಕೀರ್ಣ ಜೋಡಣೆ – ಇವೆರಡೂ ಇಲ್ಲದ ಟುಲಿಪ್ ಹೂಗಳು ಎಕರೆ ಗಟ್ಟಲೆ ಬಯಲಿನಲ್ಲಿ ಕಿಲೋಮೀಟರಿನಷ್ಟು ಉದ್ದದ ಸಾಲಿನಲ್ಲಿ ಅರಳಿ ನಿಂತರೆ ಹೊಸ ಲೋಕವನ್ನೇ ಕಣ್ಣಿಗೆ ಕಟ್ಟುವುದು ಹೌದು. 80 ಎಕ್ರೆ ವಿಶಾಲ ತೋಟದಲ್ಲಿ ಬೆಳೆಯುವ 70 ಲಕ್ಷ ಟುಲಿಪ್ ಮತ್ತೆ ಡಾಫೋಡಿಲ್ ಹೂವುಗಳ ಈ ತೋಟ ವಸಂತ ಮಾಸದ ಎರಡು ತಿಂಗಳುಗಳಲ್ಲಿ ಮಾತ್ರ ಪ್ರವಾಸಿಗರಿಗೆ ತೆರೆದಿರುತ್ತದೆ; ಆ ಸಮಯದಲ್ಲಿ ನೀವು ಭೇಟಿ ನೀಡಿದರೆ ನಿಮ್ಮ ಪರಿಚಯದ ಭಾರತೀಯರೊಬ್ಬರು ಕಂಡರೆ ಅಥವಾ ನಿಮ್ಮ ಹತ್ತಿರದಲ್ಲೇ ನಿಮ್ಮ ಆಡು ಭಾಷೆ ಕಿವಿಗೆ ಬಿದ್ದರೆ ಆಶ್ಚರ್ಯ ಪಡಬೇಕಾಗಿಲ್ಲ; ಸ್ವಿಝರ್ಲೆಂಡಿನ ಹಿಮಪರ್ವತಗಳಂತೆ ಭಾರತೀಯರಿಗೆ ಬಹಳ ಇಷ್ಟದ ಪ್ರವಾಸಿ ತಾಣ ಅಮ್‌ಸ್ಟರ್‌ಡ್ಯಾಮ್ ಹತ್ತಿರದ ಈ ಟುಲಿಪ್ ಹೂದೋಟ.

15ನೆಯ ಶತಮಾನದಲ್ಲಿ ಟುಲಿಪ್ ಹೂವುಗಳ ಬಗ್ಗೆ ಬರೆಯಲಾದ ಪುಸ್ತಕಗಳು, ಚಿತ್ರ ಪಟಗಳು ಹಾಲಂಡ್ ದೇಶದ ಹೂವುಗಳಿಗೆ ಜಗತ್ತಿನಾದ್ಯಂತ ಬೇಡಿಕೆ ತಂದು ಕೊಟ್ಟವು . 17ನೆಯ ಶತಮಾನದ ಹೊತ್ತಿಗೆ ಬೇಡಿಕೆ ಇನ್ನೂ ಹೆಚ್ಚಿ ಹಾಲಂಡ್ ನಲ್ಲಿ ಟುಲಿಪ್ ಸನ್ನಿ ಶುರು ಆಗಿತ್ತು.

ಹೂವುಗಳು ಅತ್ಯಂತ ದುಬಾರಿಯಾಗಿ ಟುಲಿಪ್ ಮೊಗ್ಗುಗಳನ್ನೇ ಹಣವಾಗಿ ಬಳಸುವುದು ಶುರು ಆಯಿತು. ಆ ಕಾಲವನ್ನು ಹೂವಿನ ಮಾರುಕಟ್ಟೆಯ ಮೊದಲ ಆರ್ಥಿಕ ಗುಳ್ಳೆ ಎಂದು ಕರೆಯುತ್ತಾರೆ. ಗುಳ್ಳೆ ಭಗ್ನವಾಗುವ ತನಕವೂ ಟುಲಿಪ್ ಮೊಗ್ಗುಗಳನ್ನೇ ಗಳನ್ನೇ ಹಣದ ಬದಲಿಗೆ ಬಳಸುವುದು ಮುಂದುವರಿಯಿತು. ಹೂಗಳ ಮಾರುಕಟ್ಟೆ ಆರ್ಥಿಕ ಕುಸಿತ ಕಂಡರೂ, ಹಾಲೆಂಡ್ ಈಗಲೂ ಜಗತ್ತಿನ ಅತಿ ದೊಡ್ಡ ಹೂ ಮಾರಾಟಗಾರ. ಟುಲಿಪ್ ಹೂಗಳು ಪ್ರವಾಸಿಗರನ್ನು ಹಾಲೆಂಡ್ ನ ಒಳಗೆ ಬರಮಾಡಿಕೊಂಡರೆ, ಇಲ್ಲಿ ಬಂದ ನಂತರ ಹಾಲೆಂಡಿಗರ ಸಾಹಸ ನಮ್ಮ ಕಣ್ಣೆದುರು ನಿಲ್ಲುತ್ತದೆ. ಡಚ್ ಜನರು ಹೂ ಮಾರಾಟಗಾರರಷ್ಟೇ ಅಲ್ಲ ಹೋರಾಟಗಾರೂ ಹೌದು. ಅವರ ಹೋರಾಟ ನೀರಿನ ಜೊತೆಗೆ!

ಹಾಲೆಂಡಿನವರು ಸಮುದ್ರದ ಜೊತೆ ಜಗಳವಾಡಿ ತಮ್ಮ ನೆಲವನ್ನು ವಾಪಸ್ ಪಡೆದವರು. ಹಾಗೆ ಪಡೆದ ನೆಲವನ್ನು ಉಳಿಸಿಕೊಳ್ಳಲು ಹೋರಾಡುವವರು.

17ನೆಯ ಶತಮಾನದಲ್ಲಿ ಡಚ್ ನಾವಿಕರು ಇಲ್ಲಿಗೆ ಬಂದಿಳಿದರು. ಸಮುದ್ರವನ್ನು ಮಥಿಸಿ ಅಮೃತ ಹುಡುಕಿದ್ದು , ಮುಳುಗಿ ನಿಧಿ ಹುಡುಕುವವರ ಬಗ್ಗೆ ಓದಿದ್ದೇವೆ ಕೇಳಿದ್ದೇವೆ. ಡಚ್ ನಾವಿಕರ ಅಂದಿನ ಸಾಹಸ ಒಂದು ದೇಶವನ್ನೇ ಹುಡುಕಿ ಕೊಟ್ಟಿತು. ಹಾಲೆಂಡಿನ ಶೇ.50ರಷ್ಟು ಭೂಭಾಗ ಸಮುದ್ರ ಮಟ್ಟಕ್ಕಿಂತ ಕೆಳಗಿದೆ. ಸಮುದ್ರ ನೀರು ಹಿನ್ನೀರಾಗಿ ಕಾಲುವೆಯಾಗಿ ಹಾಲಂಡ್ ದೇಶದ ಒಳ ನುಗ್ಗಲು ಪ್ರತಿ ಕ್ಷಣವೂ ಹವಣಿಸುತ್ತಿರುತ್ತದೆ. ಹಾಗಾಗಿ ಇಲ್ಲಿನ ಜನರು ಅವಿರತವಾಗಿ ಈ ನೀರನ್ನು ಮೊಗೆದು ಸಮುದ್ರಕ್ಕೆ ಚೆಲ್ಲುತ್ತ ಬದುಕುತ್ತಾರೆ!

ಇಡೀ ದೇಶವನ್ನು ಮುಳುಗಿಸಬಲ್ಲಷ್ಟು ನೀರನ್ನು ತಿರುಗಿ ಸಮುದ್ರಕ್ಕೆ ಚೆಲ್ಲಲು ವ್ಯವಸ್ಥೆ ಮತ್ತು ವಿಜ್ಞಾನ ಎರಡರ ಸಹಕಾರವೂ ಬೇಕು. ದೇಶದ



